ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೭, ಡಿಸೆಂಬರ್ ೨೦೧೫

ಕ್ರಿಸ್ಮಸ್ ಹಬ್ಬದ ಶುಭಾಶಯಗಳು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಪ್ರಚಲಿತ ... ಪು. ೨

ಚಿಲುಮೆಯ ಒಳಗೆ

ಹೊಸರುಚಿ ... ಪು. ೩

ವಿಚಾರ-ವಿಹಾರ ... ಪು. ೪

ಚಿಲುಮೆಯ ಒಳಗೆ

ರಾಂ ರಾಮ! ಹಾಸ್ಯ ... ಪು. ೫

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೮

ಚಿಲುಮೆಯ ಒಳಗೆ

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೯

ಪದ ಪುಂಜ/ರಂಗೋಲಿ ... ಪು. ೧೦

ಚಿಲುಮೆಯ ಒಳಗೆ

ಹಾಸ್ಯ ... ಪು. ೧೧

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೪

ಕನ್ನಡದ ಒಂದು ಕಾಯಕಕ್ಕೆ ಮನವಿ

ಪುಟ ೧೩

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಜೀವನದಲ್ಲಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗುವಾಗ, ಈಗಿನ ಹಂತದಲ್ಲಿನ ಆಗುಹೋಗುಗಳ ವಿಮರ್ಶೆಯು ಮತ್ತು ಮುಂದಿನ ಹಂತದಲ್ಲಿ ಮಾಡಬಹುದಾದ ಕಾರ್ಯಗಳ ಬಗೆಗಿನ ಮುಂದಾಲೋಚನೆಯು ಅವಶ್ಯಕ ಎನ್ನುವುದು ಲೋಕಾಭಿಮತವಿರಬಹುದು. ಆದರೆ ಇವೆರಡನ್ನೂ ಕಾರ್ಯರೂಪದಲ್ಲಿ ಮಾಡಿದಾಗ ಸಿಗುವ ಒಂದು ತೃಪ್ತಿಯು ಸ್ವಾನುಭವದಿಂದ ಮಾತ್ರ ಗ್ರಹಿಸಲು ಸಾಧ್ಯ.

ಎಂದಿನಂತೆ ವರ್ಷದ ಕೊನೆಯ ಹಂತದಲ್ಲಿದ್ದೀವಿ. ಬರುವ ಜನವರಿಯಿಂದ "ಹಾಗೆ ಮಾಡೋಣ", "ಹೀಗೆ ಮಾಡೋಣ" ಎನ್ನುವ ರೆಸಲ್ಯೂಶನ್ ಸಮಯ. ಅದರ ತಪ್ಪು ಸರಿಯ ಬಗೆಗಿನ ಚರ್ಚೆಯನ್ನು ಒಂದು ಪಕ್ಕಕ್ಕಿಡೋಣ. ಏಕೆಂದರೆ ಅದು ವಯ್ಯಕ್ತಿಕ. ಪ್ರತಿಯೊಬ್ಬರ ಈ ಆಯ್ಕೆಯು ಸಮಾಜದ ಮೇಲೆ ಪರಿಣಾಮ ಬೀರುತ್ತದೆಯಾದರೂ ಅದಕ್ಕಿಂತ ಹೆಚ್ಚು ಗಮನ ಹರಿಸಬೇಕಾದ ವಿಷಯಗಳೂ ಇರುತ್ತವೆ ಎನ್ನುವುದು ಅಷ್ಟೇ ಸತ್ಯ. ಈ ಪತ್ರಿಕೆಯ ಉದ್ದೇಶಕ್ಕೆ ಪೂರಕವಾದ ಅಂತಹ ಒಂದು ಅಂಶವೆಂದರೆ ನಾವು ಬರೆಯುವ ಮತ್ತು ಮಾತನಾಡುವ ನುಡಿಯ ಬಗ್ಗೆ.

ನುಡಿಯ ಸೂಕ್ತ ಬಳಕೆ ಮತ್ತು ನುಡಿಯ ನಿರಂತರ ಬಳಕೆ ಅದರ ಉಳಿಯುವಿಕೆಯನ್ನು ಕಾಪಾಡುತ್ತದೆ. ಈ ನಿಟ್ಟಿನಲ್ಲಿ ಹೇಳುವುದಾದರೆ, ಒಂದು ನುಡಿಯ ಸಂಸ್ಕೃತಿಯಲ್ಲಿ ಬೆಳೆದು, ಅದನ್ನು ತೊರೆಯುವುದು ಭಾಷೆಗೆ ಮಾಡುವ ದ್ರೋಹವೆಂದು ತಿಳಿಯುವುದಕ್ಕಿಂತ ಹೆಚ್ಚು, ಅದರಿಂದ ನಮಗೆ ಎಷ್ಟು ನಷ್ಟವಾಗುತ್ತಿದೆ ಎನ್ನುವ ಒಂದು ಯೋಚನೆಯನ್ನು ಮಾಡುವುದು ಒಳ್ಳೆಯ ಬೆಳವಣಿಗೆ. ನಾವಾಡುತ್ತ ಬಂದಿರುವ ನುಡಿಯನ್ನು ನಾವು, ನಮ್ಮ ಮಕ್ಕಳು ಆಡದಿದ್ದರೆ, ನಮ್ಮಲ್ಲಿ ಗಾಡವಾಗಿ ಚಿಕ್ಕಂದಿನಿಂದ ಬೆಳೆದುಕೊಂಡು ಬಂದಿರುವ ನಮ್ಮ ಅನೇಕ ಪದವೈಶಿಷ್ಟ್ಯಗಳು, ಹಾಡು, ಪದ್ಯಗಳು, ಎಲ್ಲಾ ನೆನಪಿಗೆ ಮಾತ್ರ ಉಳಿದು ಆ ಕೊರತೆಯು ನಮ್ಮನ್ನು ಸದಾ ಕಾಡುತ್ತದೆ. ಸ್ನೇಹಕೂಟಗಳಲ್ಲಿ "ಓಹ್! ಆ ಸೋಮೇಶ್ವರ ಶತಕ ಅದೆಷ್ಟು ಚೆನ್ನಾಗಿತ್ತಲ್ವ", "ಆ ಅಡಿಗರ ಪದ್ಯ ಇನ್ನೂ ಗೂಯ್ ಗುಡ್ತಿದೆ", "ಡಿ. ವಿ. ಜಿ ಯವರ ಆ ಸಾಲು ... ಯಾಕೋ ನೆನಪಿಗೇ ಬರ್ತಿಲ್ಲ" ಹೀಗೆ ನೆನಪಿಸಿಕೊಂಡು, "ನಮ್ಮ ಮಕ್ಕಳು ಇವೆಲ್ಲ ಕಲಿಯುವುದಕ್ಕೆ ಆಗಲೇ ಇಲ್ಲ, ಏನು ಮಾಡೋದಿಕ್ಕೆ ಆಗುತ್ತೆ" ಎಂದು ಕೊರಗುತ್ತೇವೆ.

ಹೊರನಾಡ ಚಿಲುಮೆಯ ಬಳಗದಿಂದ ಓದುಗರಿಗೆ ನಮ್ರತೆ ಮತ್ತು ವಿನಂತಿಯಿಂದ ಒಂದು ಸಂಕಲ್ಪಕ್ಕಾಗಿ ಕೋರಿಕೆ. ಅದುವೇ "ಬರುವ ವರ್ಷದಿಂದ ಇಮೇಲ್, ಚಾಟಿಂಗ್, ಎಸ್. ಎಂ ಎಸ್, ಫೇಸ್ಬುಕ್, ವಾಟ್ಸಾಪ್ ಮುಂತಾದ ಸಂಪರ್ಕ ಮಾಧ್ಯಮದಲ್ಲಿ ಸಾಧ್ಯವಾದಾಗಲೆಲ್ಲ ಕನ್ನಡದ ಅಕ್ಷರದಲ್ಲಿ ಬರೆಯುವೆ ಎಂಬ ಪ್ರತಿಜ್ಞೆ". ಇಲ್ಲಿ "ಸಾಧ್ಯವಾದಾಗಲೆಲ್ಲ" ಎನ್ನುವುದನ್ನು ಮಾತ್ರ ನೆನಪಿಟ್ಟುಕೊಂಡು ಜಾರಿಕೊಳ್ಳದಿರಿ. ಸಾಂಟಕ್ಲಾಸ್ ನಿಮ್ಮನ್ನೆಲ್ಲ ನೋಡುತ್ತಿರುತ್ತಾನೆ. ಸುಮ್ಮಸುಮ್ಮನೆ ಆಗಲ್ಲ ಅಂತ ಸುಳ್ಳು ಹೇಳಿ ತಪ್ಪಿಸಿಕೊಳ್ಳಬೇಡಿ. ನಿಮ್ಮ ತಪ್ಪು ಒಪ್ಪುಗಳನ್ನೆಲ್ಲ ಅವನು ಪಟ್ಟಿ ಮಾಡಿ, ಕನ್ನಡದ ಲಿಪಿಯಲ್ಲಿ ಬರೆದರೆ ಮಾತ್ರ ಕ್ರಿಸ್ಮಸ್ಸಿಗೆ ಬಹುಮಾನ ಕೊಡೋದು. ನೆನಪಿರಲಿ! ▪

ಎರಡು ತಿಂಗಳ ಪ್ರಮುಖ ದಿನಗಳು

ಡಿಸೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ಶರದ್/ಹೇಮಂತ ಋತು, ಕಾರ್ತೀಕ/ಮಾರ್ಗಶಿರ ಮಾಸ

01 ಮಂ - ವಿಶ್ವ ಏಡ್ಸ್ ದಿನ
07 ಸೋ- ಏಕಾದಶಿ, ಬೆಂಗಳೂರು ಕಡಲೇಕಾಯಿ ಪರಿಷೆ
10 /11 ಗು/ಶು - ಅಮಾವಾಸ್ಯೆ
12 ಶ - ಮಾರ್ಗಶಿರ ಮಾಸ ಆರಂಭ
23 ಬು - ಹನುಮಾನ್ ಜಯಂತಿ
24 ಗು ಈದ್ ಮಿಲಾದ್
25 ಶು - ಕ್ರಿಸ್ ಮಸ್, ದತ್ತಾತ್ರೇಯ ಜಯಂತಿ
28 ಸೋ - ಸಂಕಷ್ಟ ಚತುರ್ಥಿ

ಜನವರಿ, ಶ್ರೀ ಜಯ ನಾಮ ಸಂವತ್ಸರ, ದಕ್ಷಿಣಾಯನ/ಉತ್ತರಾಯಣ, ಹೇಮಂತ ಋತು, ಮಾರ್ಗಶಿರ/ಪುಷ್ಯ ಮಾಸ

01 ಶು - ಆಂಗ್ಲವರ್ಷಾರಂಭ
10 ಭಾ - ಅಮಾವಾಸ್ಯೆ
12 ಮಂ - ಸ್ವಾಮಿ ವಿವೇಕಾನಂದ ಜನ್ಮದಿನ
15 ಶು - ಮಕರ ಸಂಕ್ರಾಂತಿ/ಉತ್ತರಾಯಣ ಕಾಲ ಆರಂಭ
26 ಸೋ - ಭಾರತ ಗಣರಾಜ್ಯ ದಿನ
27 ಬು - ಸಂಕಷ್ಟ ಚತುರ್ಥಿ

ಕ್ರಿಸ್ಮಸ್ ಸಡಗರ

ಸ್ಮಿತಾ ಮೇಲ್ಕೋಟೆ

ಆಷಾಡ ಮುಗಿದರೆ ನಮ್ಮ ಭಾರತೀಯ ಹಬ್ಬಗಳೆಲ್ಲ ಮುಗಿದಂತೆ. ಆದರೆ ಡಿಸೆಂಬರ್ ಕೊನೆ ಬಂತೆಂದರೆ, ಇಲ್ಲಿ ಆಸ್ಟ್ರೇಲಿಯಾ ದೇಶದ ಕ್ರಿಸ್ಮಸ್ ಸಡಗರ ಪ್ರಾರಂಭ. ಮಕ್ಕಳಿಗೆ ಬೇಸಿಗೆ ರಜೆ. ಹೌದು ಡಿಸೆಂಬರ್ ತಿಂಗಳು ಸುಡುಬಿಸಿಲುಗಾಲ ಇಲ್ಲಿ. ಮಕ್ಕಳಿಗೆ ಶಾಲೆ ಮುಗಿದು ರಜದ ಮಜ ಶುರು.

ನವೆಂಬರ್ ಕಡೆ ಕಡೆಗೆ ಮನೆ, ಅಂಗಡಿ ಮುಂಗಟ್ಟು ಕ್ರಿಸ್ಮಸ್ ಅಲಂಕಾರಕ್ಕೆ ತೊಡಗುತ್ತವೆ. ಎಲ್ಲಿಲ್ಲದ ಹಬ್ಬದ ಸಡಗರ ಸಂಭ್ರಮವನ್ನು ರಾತ್ರಿಯಲ್ಲಿ ನೋಡಿದರೆ, ಬಣ್ಣ ಬಣ್ಣದ ಬೆಳಕಿನ ಚಿತ್ತಾರ, ರೈನ್ ಡೀರ್ ಸಾಂಟಾ ಕ್ಲಾಸ್ ತಾತನ ವಾಹನ ಹೊಳೆಯುತ್ತಿರುತ್ತವೆ.

ಪ್ರತಿ ಮನೆಯ ಮುಂದೆಯೂ, ಹಬ್ಬದ ಆಚರಣೆ ಪ್ರಯುಕ್ತ, ಹೂವಿನ ಗೋಲಾಕಾರದ ಹೂಗುಚ್ಛ, ಮನೆ ಒಳಗೆ ಮೂಲೆಯಲ್ಲಿ ಚಿಕ್ಕ ಕ್ರಿಸ್ಮಸ್ ಮರ, ಅದಕ್ಕೆ ವಿವಿಧ ಹೊಳೆಯುವ ನಕ್ಷತ್ರಗಳು, ಮಿನುಗುವ ನಕ್ಷತ್ರ, ಬಣ್ಣಬಣ್ಣದ ಆಟಿಕೆಗಳು ಮುಂತಾದವುಗಳನ್ನು ತೂಗಾಡಿಸುತ್ತಾರೆ. ಮರದ ಕೆಳಗೆ ಮನೆಯವರಿಗೆಲ್ಲಾ ಉಡುಗೊರೆಗಳನ್ನು ಆಕರ್ಷಕ ಕಾಗದದಲ್ಲಿ ಸುತ್ತಿ ಇಡುತ್ತಾರೆ. ತಾತ ಅಜ್ಜಿಯರು ಮೊಮ್ಮಕ್ಕಳಿಗೆ, ಮಕ್ಕಳಿಗೆ ಉಡುಗೊರೆ ಕೊಡಲು ಸುಸಮಯ. ಚಿಕ್ಕವರೂ, ದೊಡ್ಡವರೂ ಎಲ್ಲರೂ ಎದುರು ನೋಡುವ ಸುಂದರ ಹಬ್ಬ.

ಕೆಲವು ಮನೆಗಳ ಮುಂದೆಯಂತೂ ದೀಪಗಳ ದೊಡ್ಡ ಅಲಂಕಾರ, ಗೊಂಬೆಗಳು ಮನ ಸೂರೆಗೊಳ್ಳುತ್ತವೆ. ಇಡೀ ಮನೆಯು ರಾತ್ರಿಯ ವೇಳೆ ನಕ್ಷತ್ರ ಲೋಕವೇ ಕೆಳಗಿಳಿದ ಹಾಗೆ ಗೋಚರಿಸುತ್ತವೆ. ಕೆಲವು ರಸ್ತೆಗಳ ಪ್ರತಿಯೊಂದು ಮನೆಯವರು ಕ್ರಿಸ್ಮಸ್ ದೀಪದ ಅಲಂಕಾರದಿಂದ, ಜನಗಳನ್ನು ಆಕರ್ಷಿಸುತ್ತಾರೆ. ಕ್ರಿಸ್ಮಸ್ ದೀಪದ ಅಲಂಕಾರ ನೋಡಲೆಂದೇ ರಾತ್ರಿಯ ಹೊತ್ತು, ಕಾರಿನಲ್ಲಿ ಕುಟುಂಬಗಳು ಬೇರೆ ಬೇರೆ ಬಡಾವಣೆಗೆ ಮಕ್ಕಳು ಮರಿಗಳೊಂದಿಗೆ ಡ್ರೈವ್ ಹೋಗುತ್ತಾರೆ. ಕಾರ್ ನಿಲ್ಲಿಸಿ ಮನೆಗಳ ಮುಂದೆ ನಿಧಾನವಾಗಿ ನಡೆದು ಕೊಂಡು ಮಕ್ಕಳು ಸಾಂಟಾ ವೇಷದಾರಿಯನ್ನು ನೋಡಿ ಸಂತೋಷಪಡುವುದನ್ನು ನೋಡುವುದೇ ಒಂದು ಆನಂದ. ಜೀಸಸ್ ಮಗುವಿನ ಬೊಂಬೆಗಳು ಕೂಡ ಎಲ್ಲ ಕಡೆಯಲ್ಲೂ ಕಂಡು ಬರುತ್ತದೆ. ಶಾಪಿಂಗ್ ಸೆಂಟರ್ ಗಳು ತುಂಬಿ ತುಳುಕುತ್ತಾ ಇರುತ್ತವೆ.

ಕ್ರಿಸ್ಮಸ್ ತಾತ ಸಾಂಟಾನನ್ನು ಶಾಪಿಂಗ್ ಮಾಲುಗಳಲ್ಲಿ ಕೂಡ ನೋಡಬಹುದು. ಮಕ್ಕಳು ಸಂಸಾರದ ಜೊತೆಗೆ ಹೋಗಿ ಫ್ಯಾಮಿಲಿ ಫೋಟೋ ತೆಗೆಸಿಕೊಳ್ಳುವುದು ಕೂಡ ಒಂದು ವಿಶೇಷ ರೂಡಿ. ಸಾಂಟಾ ತಾತನ ನೋಡಿ ಎಳೆ ಮಕ್ಕಳು ಅಳು, ಅಳು-ಭಯ ಮಿಶ್ರಿತ ಮಕ್ಕಳನ್ನು ಸಮಾಧಾನಿಸಿ ಅವರನ್ನು ನಗಿಸಿ ಫೋಟೋ ತೆಗೆಯಕ್ಕೆ ಪ್ರಯತ್ನ ಪಡ್ತಾ ಇರುವ ಕ್ಯಾಮೆರಾ ಮ್ಯಾನ್ ಗಳು. ಇದೊಂದು ಮಿನಿ ಷೋ ತರಹ ನೋಡುಗರಿಗೆ.

ಸಾಂಟಾ ತಾತ ನಾರ್ತ್ ಪೋಲ್ ನಿಂದ ಬರುತ್ತಾನೆ, ಒಳ್ಳೆಯ ಹುಡುಗರಿಗೆ ಉಡುಗೊರೆ ತರುತ್ತಾನೆ ಎಂಬ ನಂಬಿಕೆ ಮಕ್ಕಳಿಗೆ. ಇಲ್ಲಿ ಆಸ್ಟ್ರೇಲಿಯಾ ದೇಶದಲ್ಲಿ ಬಹಳ ಬಿಸಿಲು, ಆದರೂ ಬಿಳಿ ಮಂಜು ಬಿದ್ದ ಹಾಗೆ ಕಾಣುವ ಮನೆಯ ಮುಂದಿನ ಉದ್ಯಾನವನಗಳು ಸುಡು ಬಿಸಿಲನ್ನು ಮರೆಸುತ್ತೆ.

ಕ್ರಿಸ್ಮಸ್ ಹಬ್ಬದ ದಿನವಂತೂ ಕುಟುಂಬಗಳು ಒಂದುಗೂಡಿ ಭೋಜನ ಮಾಡುತ್ತಾರೆ ಜೊತೆಗೂಡಿ ಸಂತೋಷದಿಂದ ಸಮಯ ಕಳೆಯುತ್ತಾರೆ. ಕ್ರಿಸ್ಮಸ್ ರಜದಲ್ಲಿ ಬೇರೆ ಊರಿಗೆ ಹೋಗುವುದು, ಕುಟುಂಬದ ಜೊತೆ ಅತ್ಯಮೂಲ್ಯ ಸಮಯ ಕಳೆಯುವುದೇ ಹಬ್ಬದ ಹೈಲೈಟ್.

ಭಾರತದಿಂದ ಬಂದ ವಲಸಿಗರು ಕೂಡ ಕ್ರಿಸ್ಮಸ್ ಹಬ್ಬದ ಸಂತೋಷವನ್ನು ಸಂಪೂರ್ಣವಾಗಿ ಅನುಭವಿಸುತ್ತಾರೆ.

ಕ್ರಿಸ್ಮಸ್ ಹಬ್ಬದ ಮಾರನೆ ದಿನ ಬಾಕ್ಸಿಂಗ್ ಡೇ ಎಂದು ಕರೆಯುತ್ತಾರೆ. ಕ್ರಿಸ್ಮಸ್ ಗಿಡದ ಕೆಳಗೆ ಇಟ್ಟ ಉಡುಗೊರೆಗಳ ಡಬ್ಬ ತೆಗೆದು ನೋಡಿ ಆಮೇಲೆ ಪ್ಯಾಕಿಂಗ್ ಮೆಟೀರಿಯಲ್ ಮಡಚಿ ಎಸೆಯುವ ಕಾರ್ಯಕ್ರಮ. ಅದರಲ್ಲೂ ಕೂಡ ಮನೆ ಮಂದಿಯೆಲ್ಲಾ ಸಂತೋಷ ಕಾಣುತ್ತಾರೆ.

ಚಿಲುಮೆಯ ಓದುಗರಿಗೆಲ್ಲರಿಗೂ ಕ್ರಿಸ್ಮಸ್ ಹಬ್ಬದ ಶುಭಾಶಯಗಳು ▪

ಕೇಲ್ ಸೊಪ್ಪಿನ ಬಸ್ಸಾರು

ತಯಾರಿ ಮತ್ತು ನಿರೂಪಣೆ:
ತ್ರಿವೇಣಿ ನಾಗಶೈಲ

ಹೊರನಾಡ ಚೆಲುಮೆಯ ಆಹಾರ-ಆರೋಗ್ಯ ಅಂಕಣದಲ್ಲಿ "ಕೇಲ್ ಸೊಪ್ಪು" ಇದರ ಬಗ್ಗೆ ಮಾಹಿತಿಯನ್ನು ಶ್ರೀಮತಿ ರಾಜೇಶ್ವರಿ ಜಯದೇವ್ ಅವರು ಒದಗಿಸಿದ್ದರು. ಓದುಗರಾದ ಶ್ರೀಮತಿ ತ್ರಿವೇಣಿ ನಾಗಶೈಲ ಅವರು ಈ ಬರಹದಿಂದ ಪ್ರಭಾವಿತರಾಗಿ, ತಮ್ಮ ಅಡುಗೆಯಲ್ಲಿನ ನೈಪುಣ್ಯತೆಯಿಂದ ಕೇಲ್ ಸೊಪ್ಪನ್ನು ಬಳಸಿ ಸ್ವತಃ ಅಡುಗೆ ತಯಾರಿಸಿ, ಅದು ಅಚ್ಚುಕಟ್ಟಾಗಿತ್ತೆಂದು ತಿಳಿದ ಮೇಲೆ, ಈ ಬರಹವನ್ನು ಕಳುಹಿಸಿದರು. ಹೊರನಾಡ ಚೆಲುಮೆಯ ಇತರ ಓದುಗರೂ ಆರೋಗ್ಯಕ್ಕೆ ಒಳ್ಳೆಯದಾದ ಈ ಹೊಸ ನಮೂನೆಯ ಬಸ್ಸಾರಿನ ಉಪಯೋಗ ಪಡೆದುಕೊಳ್ಳಲಿ ಎಂಬುದೇ ನಮ್ಮ ಆಶಯ. ವಿಧಾನವನ್ನು ಬರೆದುಕೊಟ್ಟಿದ್ದಕ್ಕಾಗಿ ಲೇಖಕರಿಗೆ ಓದುಗರ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ - ಸಂ

ಬೇಕಾದ ಸಾಮಗ್ರಿಗಳು

ಒಂದು ಕಟ್ಟು ಕೇಲ್ ಸೊಪ್ಪು.
೧ ಪಾವು ಹೆಸರುಕಾಳು.
೨ ಈರುಳ್ಳಿ.
ಹಸಿರುಮೆಣಸಿನ ಕಾಯಿ. (ಅಭಿರುಚಿಗೆ ತಕ್ಕಷ್ಟು)
ಕೊತ್ತಂಬರಿ ಸೊಪ್ಪು.
ಸಾರಿನ ಪುಡಿ.
ಹುಣಿಸೇ ಹಣ್ಣು.
ಹಸಿ ಕೊಬ್ಬರಿ.

ಮಾಡುವ ವಿಧಾನ

ಪಲ್ಯ ಮಾಡುವ ವಿಧಾನ: ಕೇಲ್ ಸೊಪ್ಪನ್ನು ಮಧ್ಯಭಾಗದ ದಂಟಿನಿಂದ ಬಿಡಿಸಿಕೊಂಡು, ಚೆನ್ನಾಗಿ ತೊಳೆದು ಸಣ್ಣಗೆ ಹೆಚ್ಚಿಟ್ಟು ಕೊಳ್ಳಿ. ಒಂದು ಪಾತ್ರೆಯಲ್ಲಿ ಚೆನ್ನಾಗಿ ನೀರು ಹಾಕಿ ಹೆಸರುಕಾಳನ್ನು ಬೇಯಲು ಇಡಿ. ಕಾಳು ಅರ್ಧ ಬೆಂದಿರುವಾಗ ಒಂದು ಹಿಡಿ ಕಾಳನ್ನು ತೆಗೆದಿಟ್ಟುಕೊಂಡು ಉಳಿದ ಕಾಳಿಗೆ ಹೆಚ್ಚಿರುವ ಸೊಪ್ಪನ್ನು ಬೆರೆಸಿ. ಕಾಳು, ಸೊಪ್ಪು ಬೆಂದ ಮೇಲೆ ನೀರನ್ನು ಬಸಿದು ತೆಗೆದಿಟ್ಟುಕೊಳ್ಳಿ. ನಂತರ ಒಂದು ದಪ್ಪ ತಳವಿರುವ ಪಾತ್ರೆಯಲ್ಲಿ ಒಗ್ಗರಣೆಗೆ ಎಣ್ಣೆ ಕಾಯಿಸಿ, ಸಾಸಿವೆ, ಕಡಲೆಬೇಳೆ, ಉದ್ದಿನಬೇಳೆ, ಕರಿಬೇವು, ಹಸಿರುಮೆಣಸಿನ ಕಾಯಿ, ಸಣ್ಣಗೆ ಹೆಚ್ಚಿದ ಈರುಳ್ಳಿ ಹಾಕಿ ಒಗ್ಗರಣೆ ಮಾಡಿಕೊಳ್ಳಿ. ನಂತರ ಅದಕ್ಕೆ ಬೇಯಿಸಿರುವ ಕಾಳು ಹಾಗೂ ಸೊಪ್ಪಿನ ಮಿಶ್ರಣವನ್ನು ಹಾಕಿ, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಬೆರೆಸಿ. ಮೇಲೆ ತೆಂಗಿನ ತುರಿ ಮತ್ತು ಕೊತ್ತಂಬರಿ ಸೊಪ್ಪು ಉದುರಿಸಿದರೆ ಪಲ್ಯ ಸಿದ್ಧ.

ಬಸ್ಸಾರು ಮಾಡುವ ವಿಧಾನ: ಒಂದು ಈರುಳ್ಳಿಯಲ್ಲಿ ಅರ್ಧ ಭಾಗ ಎಣ್ಣೆ ಹಾಕದೆ ಹುರಿದುಕೊಳ್ಳಿ. ಹುರಿದುಕೊಂಡ ಈರುಳ್ಳಿಯೊಂದಿಗೆ ಮತ್ತರ್ಧ ಹಸಿ ಈರುಳ್ಳಿ, (ಬೇಕಿದ್ದರೆ ನಾಲ್ಕು ಎಸಳು ಬೆಳ್ಳುಳ್ಳಿ), ತೆಂಗಿನ ತುರಿ, ತೆಗೆದಿಟ್ಟುಕೊಂಡಿರುವ ಬೇಯಿಸಿದ ಕಾಳು, ನಿಮ್ಮ ರುಚಿಗೆ ತಕ್ಕಂತೆ ಸಾರಿನ ಪುಡಿ, ಸಣ್ಣ ನಿಂಬೆ ಗಾತ್ರದ ಹುಣಿಸೇಹಣ್ಣು, ಚಿಟಿಕೆ ಅರಿಸಿನ ಇಷ್ಟನ್ನೂ ರುಬ್ಬಿಕೊಳ್ಳಿ. ನಂತರ ಬಸಿದಿಟ್ಟುಕೊಂಡಿರುವ ಕಾಳುಬೇಯಿಸಿದ ನೀರಿಗೆ ರುಬ್ಬಿದ ಮಸಾಲೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಸಾರಿನ ಹದ ಬರುವಂತೆ ನೀರು ಹಾಕಿ ಕುದಿಸಿ. ಸಾಸಿವೆ, ಇಂಗು ಮತ್ತು ಕರಿಬೇವಿನ ಒಗ್ಗರಣೆ ಮಾಡಿ ಹಾಕಿದರೆ ಬಸ್ಸಾರು ಸಿದ್ಧ.

ಕೇಲ್ ಸೊಪ್ಪಿನೊಂದಿಗೆ ಸಬ್ಬಸಿಗೆ ಸೊಪ್ಪನ್ನೂ ಬೆರೆಸಿದರೆ ರುಚಿ ಇನ್ನೂ ಹೆಚ್ಚು.
ಹೆಸರು ಕಾಳು ಹಾಗೂ ಕೇಲ್ ಸೊಪ್ಪಿನ ಬಸ್ಸಾರು ಆರೋಗ್ಯಕರವಷ್ಟೇ ಅಲ್ಲ ಬಲು ರುಚಿಕರ ಕೂಡ.

ವಿಚಾರ ವಿಹಾರ

ಮಾಲು, ಅಡಿಲೈಡ್

ದೇವನೊಬ್ಬ

ಈ ಬಾರಿಯ 'ವಿಚಾರ ವಿಹಾರ'ವೂ ಶ್ರೀಯುತ ಜಿ.ಪಿ. ರಾಜರತ್ನಂ ರವರ 'ವಿಚಾರ ರಶ್ಮಿ' ಯ ಒಂದು ರಶ್ಮಿ.

ಒಬ್ಬನೇ ದೇವರು ಎಂದು ನಂಬಿರುವ ಇನ್ನೊಂದು ಧರ್ಮ ಯಹೂದಿ ಧರ್ಮ. ಈ ಯಹೂದಿ ಧರ್ಮದ ಯೆಹೂಧ್ಯನೊಬ್ಬನ ಮುತ್ತಿನ ವಾಕ್ಯಗಳು ಇಲ್ಲಿವೆ:

ಒಬ್ಬನು ತಿಳಿದಿದ್ದಾನೆ. ತಾನು ತಿಳಿದಿದ್ದೇನೆ ಎಂಬುದು ಅವನಿಗೆ ತಿಳಿದಿದೆ. ಅಂಥವನು ಪ್ರಾಜ್ಞ. ಇವನ ಸಂಗವನ್ನು ಮಾಡಿ, ಇವನಿಂದ ತಿಳಿದುಕೊಳ್ಳಬೇಕು.

ಇನ್ನೊಬ್ಬ ತಿಳಿದಿದ್ದಾನೆ. ತಾನು ತಿಳಿದವ ಎಂಬುದು ಅವನಿಗೆ ತಿಳಿಯದು. ಅಂಥವನಿಗೆ ನೆನಪಿಸಬೇಕು. ಅವನು ತಿಳಿದಿರುವುದನ್ನು ಅವನಿಗೆ ತಿಳಿಸಿಕೊಡಬೇಕು.

ಮತ್ತೊಬ್ಬ ತಿಳಿಯದವನು. ತಾನು ತಿಳಿಯದವನು ಎಂಬುದು ಅವನಿಗೆ ತಿಳಿದಿದೆ. ಅಂಥವನಿಗೆ ಅವನು ತಿಳಿಯದ್ದನ್ನು ತಿಳಿಸಿಕೊಡಬೇಕು.

ಮಗದೊಬ್ಬನಿಗೆ ಏನೂ ತಿಳಿಯದು. ಆದರೆ ತನಗೆ ಎಲ್ಲವೂ ತಿಳಿದಿದೆ ಎಂಬುವಂತೆ ನಟಿಸುತ್ತಾನೆ. ಅವನು ಮೂರ್ಖ. ಅಂಥವನಿಂದ ದೂರವಿರಬೇಕು.

ಮೂರ್ಖನಾದವನು ತಾನು ತಪ್ಪು ಮಾಡಿದಾಗ, ಇತರರನ್ನು ದೂಷಿಸುತ್ತಾನೆ. ಜ್ಞಾನವನ್ನು ಆರಿಸಿಕೊಂಡು ಹೋಗುವನು ತಪ್ಪು ಮಾಡಿದ್ದಲ್ಲಿ, ತನ್ನನ್ನು ತಾನು ನಿಂದಿಸಿಕೊಳ್ಳುತ್ತಾನೆ. ಎಲ್ಲವನ್ನೂ ತಿಳಿದ ಪ್ರಾಜ್ಞನೂ ಮತ್ತು ಸತ್ಪುರುಷನೂ ಆದವನು ತನ್ನನ್ನಾಗಲಿ ಇತರನ್ನಾಗಲಿ ನಿಂದಿಸುವುದಕ್ಕೆ ಅವಕಾಶವಿಲ್ಲದ ಹಾಗೆ ನಡೆದುಕೊಳ್ಳುತ್ತಾನೆ.

ಜ್ಞಾನವನ್ನು ಸಂಪಾದಿಸುವುದಕ್ಕೆ ಐದು ಮೆಟ್ಟಿಲುಗಳು:

ಮಾತನಾಡದೆ ಮೌನದಿಂದಿರುವುದು (ತಪಸ್ಯ)
ಕಿವಿಗೊಟ್ಟು ಕೇಳುವುದು (ಶ್ರವ್ಯ)
ಕೇಳಿದ್ದನ್ನು ನೆನಪಿನಲ್ಲಿಟ್ಟುಕೊಳ್ಳುವುದು (ಮನನ)
ತಾನು ಕಲಿತ ಸತ್ ವಿಚಾರವನ್ನು ಆಚರಿಸುವುದು (ಧಾರಣ)
ತಾನು ಕಲಿತಿದ್ದನ್ನು ಇತರರಿಗೆ ಭೋಧಿಸುವುದು (ಭೋಧನ)
ಮುಪ್ಪಿನ ಕಾಲದಲ್ಲಿ ಜ್ಞಾನವನ್ನು ಆರಿಸಿಕೊಂಡು ಹೋಗುವುದು ಮರಳಿನಲ್ಲಿ ಮಾಡಿದ ಗುರುತಿನ ಹಾಗೆ.
ಯೌವನದಲ್ಲಿ ಪ್ರಾಜ್ಞತೆಯನ್ನು ಅರಸಿಕೊಂಡು ಹೋಗುವುದು ಕಲ್ಲಿನಲ್ಲಿ ಕೊರೆದ ಶಾಶಸನದ ಹಾಗೆ.

ಯೆಹೂಧ್ಯನ ಈ ಮೇಲಿನ ವಾಕ್ಯಗಳು ಅಮೂಲ್ಯವಾದುದು. ಈ ಮಾತುಗಳನ್ನು ನಾವು ಕೂಡ ಪ್ರಾಜ್ಞರಾಗಿ ಇತರರಿಗೆ ಹಂಚುವ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ವಿದ್ವಾನಗಿಂತ ಅಧ್ವಾನ ಲೇಸು!!!

ಬಿಹಾರದಲ್ಲಿ ವಿದ್ಯೆಯೇ ಇಲ್ಲದ ಮಂತ್ರಿಗಳ ಸಂಪುಟದ ಬಗ್ಗೆ ಕುತೂಹಲ ಭರಿತನಾಗಿ ಬಿಹಾರದ ಮುಖ್ಯಮಂತ್ರಿಗಳ ಆಪ್ತಸಹಾಯಕನ ಕಾರ್ಯದರ್ಶಿ ಸುಳ್ಳೂ ಪ್ರಸಾದ್ ಯಾದವರನ್ನು ಭೇಟಿ ಮಾಡಿದೆ.

"ಬಿಹಾರಿಗಳೂ ಒಂದು ವಿಧದಲ್ಲಿ ಕನ್ನಡಿಗರಂತೆಯೇ. ಕನ್ನಡಿಗರು ಕುರಿತೋದದೆಯುಂ ಕಾರ್ಯಪ್ರಯೋಗ ಪರಿಣತಮತಿಗಳ್ ಅಲ್ಲವೇ. ನಾವು ಕುರಿತೋದದೆಯುಂ ಆಡಳಿತ ಪರಿಣತ ಪ್ರಭುಗಳ್" ಎಂದರು ಸುಳ್ಳೂಪ್ರಸಾದ್.

"ಆದರೂ... ಉಪ ಮುಖ್ಯಮಂತ್ರಿಗಳೇ ಕೇವಲ ಟ್ವೆಲ್ತ್ ಸ್ಟಾಂಡರ್ಡ್....?" ರಾಗವೆಳೆದೆ.

"ವಿ ಆರ್ ಸೋ ಸಾರಿ ಅಬೌಟ್ ಇಟ್. ಅವರು ಅಷ್ಟು ಓದಬಾರದಿತ್ತು. ಕ್ಷಮಿಸಿಬಿಡಿ"

"ಏಕೆ?"

"ಜನನಿ ತಾನೆ ಮೊದಲ ಗುರುವು. ಜನನಿ ಅನಕ್ಷರಸ್ಥೆಯಾಗಿರುವಾಗ ಮಗ ಇಷ್ಟೊಂದು ಓದುವುದು ಜನನಿಗೆ ಅವಮಾನ ಮಾಡಿದಂತೆ. ಕೇವಲ ಹೆಬ್ಬೆಟ್ಟಾದ ಅಮ್ಮನೇ ರಾಜ್ಯದ ಮುಖ್ಯಮಂತ್ರಿಯಾದಾಗ ಅದಕ್ಕಿಂತ ಕಡಿಮೆ ಸ್ಥಳದಲ್ಲಿರುವವರು ಅವರಿಗಿಂತಲೂ ಕಡಿಮೆ ಓದಿರಬೇಕಾಗಿತ್ತು"

"ಹೆಬ್ಬೆಟ್ಟಿಗಿಂತಲೂ ಕಡಿಮೆ ಓದು ಹೇಗೆ ಸಾಧ್ಯ?"

"ಏಕೆ ಸಾಧ್ಯವಿಲ್ಲ? ಹೆಬ್ಬೆಟ್ಟಮ್ಮ ಅಡಿಗೆ ಕಲಿತಿದ್ದರು. ಈತ ಅಡಿಗೆಯನ್ನೂ ಕಲಿಯದಿದ್ದರೆ ಅವರಿಗಿಂತ ಕಡಿಮೆ ತಿಳಿವಳಿಕೆ ಇದ್ದಂತಾಗಿ ಡಿಸಿಎಂ ಪೋಸ್ಟಿಗೆ ಸೂಟಬಲ್ ಆಗುತ್ತಿದ್ದರು. ಪಾಪ! ಯಾರದೋ ದುರುಪದೇಶಕ್ಕೆ ಒಳಗಾಗಿ ಸೆಕೆಂಡ್ ಪಿ.ಯು.ಸಿ.ವರೆಗೆ ಓದಿಬಿಟ್ಟರು. ಕ್ಷಮಿಸಿಬಿಡಿ"

"ಸುಳ್ಳೂಪ್ರಸಾದರೇ, ಇನ್ನೂ ಓದಬೇಕಿತ್ತೆಂದು ನಾನು ಹೇಳಿದ್ದು. ವಿದ್ಯೆ ಎಂದಿಗೂ...."

"ವಿದ್ಯೆ ಇರಬಾರದು ಮಿಸ್ಟರ್. ವಿದ್ಯೆ ಕೆಟ್ಟದು. ವಿದ್ಯಾವಂತರು ಜಗಳವನ್ನು ಆಡುತ್ತಾರೆ, ದಡ್ಡರು ರಾಜ್ಯವನ್ನು ಆಳುತ್ತಾರೆ"

"ಹೇಗೆ?"

"ವಿದ್ಯಾವಂತರಾದರೆ ಪುಸ್ತಕ ಬರೆಯುತ್ತಾರೆ. ಭಾಷಣ ಮಾಡುತ್ತಾರೆ. ಪ್ರಶಸ್ತಿ ಪಡೆಯುತ್ತಾರೆ, ಪ್ರಶಸ್ತಿ ಹಿಂತಿರುಗಿಸುತ್ತಾರೆ. ದೇಶದಲ್ಲಿ ಎಲ್ಲೆಡೆ ವಿದ್ಯಾವಂತರಿಂದಲೇ ಗಲಾಟೆಗಳು, ಅಸಹಿಷ್ಣುತೆ ಕಿರಿಕಿರಿಗಳು ಉಂಟಾಗುತ್ತಿವೆ. ಆದರೆ ದಡ್ಡರಿಗೆ ಈ ವಿಷಯಗಳಿರಲಿ, ಪದಗಳೇ ತಿಳಿದಿರುವುದಿಲ್ಲವಾದ್ದರಿಂದ ಜಗಳವೇ ಇರುವುದಿಲ್ಲ"

"ಜನರಲ್ಲಿ ಮತ್ತು ಜನರಲ್ಲಾಗಿ ನೀವು ಹೇಳೋದು ಸರಿಯಾದರೂ ಗೃಹಮಂತ್ರಿಯಾದರೂ ಓದಿರಬೇಕಲ್ಲವೆ?"

"ಗಮನಿಸಿ ನೋಡು. ಈಗಿನ ಗೃಹಮಂತ್ರಿಗಳು ವಿದ್ಯಾವಂತರೇ. ಆದರೆ ಗೃಹಮಂತ್ರಿಯ ಕೆಲಸಕ್ಕೆ ಸರ್ಟಿಫಿಕೇಟ್ ವಿದ್ಯೆಯೆಲ್ಲ ವೇಸ್ಟ್. ಅದಕ್ಕೆ ಬೇಕಾದ ವಿದ್ಯೆಯೇ ಬೇರೆ"

"ಯಾವುದು?"

"ಉಪಮುಖ್ಯಮಂತ್ರಿಗಳ ಅಂಕಲ್ ಪಪ್ಪು ಯಾದವನಂತೆ ಹವಾ ಇಟ್ಟುಕೊಂಡರೆ ಸಾಕು. ಮಚ್ಚು ಲಾಂಗು ಇದ್ದಕಡೆ ಶಾಂತಿ ಮಚ್ ಲಾಂಗರ್ ಇರತ್ತೆ"

"ವಿಜ್ಞಾನ ಸಚಿವರು?"

"ವಿಜ್ಞಾನವೇ ಕೆಟ್ಟದು"

"ಏಕೆ?"

"ಸೂರ್ಯ, ಚಂದ್ರ, ಮಂಗಳ ಇವೆಲ್ಲ ನಮ್ಮ ಬದುಕನ್ನು ರೂಪಿಸುವ ಗ್ರಹಗಳು. ದಡ್ಡ ವಿಜ್ಞಾನಿಗಳು ಸೂರ್ಯ ಗ್ರಹ ಅಲ್ಲ, ನಕ್ಷತ್ರ ಅಂತಾರೆ. ನಮ್ಮ ಜ್ಯೋತಿಷಿಗಳಿಗಿಂತ ಗೊತ್ತಾ ಇವರಿಗೆ? ಅಲ್ಲದೆ ನಮ್ಮ ದೇವರುಗಳಿಗೆ ವಿಜ್ಞಾನಿಗಳು ಮರ್ಯಾದೆ ತೋರಿಸಲ್ಲ"

"ಹೌದೇ?"

"ಚಂದ್ರ ದೇವರು. ಮಂಗಳ ದೇವರು. ಇವುಗಳ ಮೇಲೆ ಚಪ್ಪಲಿ, ಶೂಸು ಹಾಕಿಕೊಂಡು ನಡೆದರೆ ಅವಮಾನ ಮಾಡಿದಂತಾಗಲಿಲ್ವಾ? ವಿಜ್ಞಾನದಿಂದ ದೇವರಿಗೆ ಅವಮಾನವಾಯಿತು. ವಿಜ್ಞಾನ ಬ್ಯಾನ್ ಆಗ್ಬೇಕ್"

"ಹೋಗಲಿ. ವಿತ್ತ ಸಚಿವರು, ಹಣಕಾಸಿನ ಸಂಬಂಧವಾಗಿ ತೀರ್ಮಾನ ತೆಗೆದುಕೊಳ್ಳುವವರು. ಅವರಾದರೂ ಓದಿರಬೇಕಲ್ಲವೆ?"

"ನೆಮ್ಮದಿಯಿಂದ ಇರಬೇಕಾದರೆ ಓದಿರಬಾರದು"

"ವಿವರಿಸಿ ಪ್ಲೀಸ್"

"ಮೆಲ್ಲೋ ಪ್ರಸಾದ್ ಇರೋ ಕಡೆ ಮೆಲ್ಲೋದು ಇದ್ದೇ ಇರತ್ತೆ. ಹಣಕಾಸಿನ ಲೆಕ್ಕ ಇಟ್ಟರೆ ಹಗರಣದ ಲೆಕ್ಕ ಸಿಗತ್ತೆ, ಕಿರಿಕಿರಿ ಆಗತ್ತೆ. ಅವರೊಬ್ಬರೇ ಮೆದ್ದರು, ನನಗೇನೂ ಸಿಗಲಿಲ್ಲ ಅನ್ನೋ ಹತಾಶೆ ಮೂಡತ್ತೆ. ಆದ್ದರಿಂದ ಮೆಲ್ಲೋ ಪ್ರಸಾದ್ ಆಡಳಿತದಲ್ಲಿ ಇರೋ ಸಮಯದಲ್ಲಿ ಹಣಕಾಸಿನ ಸಚಿವ ಹೆಬ್ಬೆಟ್ಟಾಗಿರೋದೇ ಅವನಿಗೆ ಕ್ಷೇಮ"

ಮುಂದಿನ ಪುಟ ನೋಡಿ ...

“ಎಜುಕೇಶನ್ ಮಿನಿಸ್ಟ್ರಾದರೂ ಒಂದು ಡಿಗ್ರಿ ಹೊಂದಿರಬೇಡವೇ?”

“ಒಂದೇನು, 180 ಡಿಗ್ರೀನೇ ಕೊಡೋಣ ಬಿಡು”

“ನೂರೆಂಬತ್ತೇ?”

“ಹ್ಞೂಂ. ಒಂದು ಪ್ರೊಟ್ರಾಕ್ಟರ್ ತೆಗೆಸಿಕೊಟ್ಟುಬಿಟ್ಟರೆ ಆಯಿತು!” ಗಹಗಹಿಸಿದರು ಸುಳ್ಳೂಪ್ರಸಾದ್.

“ಸರ್, ಸೀರಿಯಸ್ಲೀ... ಎಜುಕೇಶನ್ ಮಿನಿಸ್ಟರಿಗೂ ಎಜುಕೇಶನ್ ಬೇಡವಾ?”

“ನೋಡಯ್ಯಾ ಕಾಶಿಹಲ್ವಾಲಿ ಕಾಶಿ ಇರಲ್ಲ, ಮೈಸೂರುಪಾಕಲ್ಲಿ ಮೈಸೂರೂ ಇರಲ್ಲ, ಪಾಕಿಸ್ತಾನವೂ ಇರಲ್ಲ. ರಿಯಾಲಿಟಿ ಷೋನಲ್ಲಿ ರಿಯಾಲಿಟಿ ಇರಲ್ಲ, ಬ್ರೇಕಿಂಗ್ ನ್ಯೂಸಲ್ಲಿ ನ್ಯೂಸೇ ಇರಲ್ಲ. ಹಾಗೇನೇ ಎಜುಕೇಶನ್ ಮಿನಿಸ್ಟರಲ್ಲಿ ಎಜುಕೇಶನ್ ಇರಲ್ಲ. ಇದರಲ್ಲಿ ಆಶ್ಚರ್ಯ ಪಡೋ ವಿಷಯ ಏನಿದೆ?”

“ಆದರೂ... ವಿದ್ಯೆಗೆ...”

“ಓದಿದವರಿಂದ ಏನಯ್ಯಾ ಪ್ರಯೋಜನ? ಓದಿಲ್ದವ್ರಿಗೆ ಗೊತ್ತಿರೋ ಲೆಕ್ಕ ಓದಿರೋವ್ರಿಗೆ ಗೊತ್ತಿರಲ್ಲ”

“ಯಾವ ಲೆಕ್ಕ ಸರ್ ಅದು?”

“ಪ್ರಜಾಪ್ರಭುತ್ವದಲ್ಲಿ ಮೆಜಾರಿಟಿ ಬಂದವರೇ ರಾಜ್ಯ ಆಳೋದು ಅಂತ ಓದಿದವರು ಹೇಳ್ತಾರೆ. ಹಾಗೇನಿಲ್ಲ. ಔಟ್‌ಸೈಡ್ ಸಪೋರ್ಟ್ ಕೊಟ್ಟು ಒನ್ ಮ್ಯಾನ್ ಮಿನಿಸ್ಟ್ರಿಯಿಂದ ದೇಶ ಆಳಬಹುದು ಅಂತ ಏನೇನೂ ಓದದೇ ಇರೋವ್ರು ತೋರಿಸಿಕೊಡ್ತಾರೆ. ಡೆಮಾಕ್ರಸೀಲಿ ಗಂಡ ಜೈಲಿಗೆ ಹೋದಾಗ ಹೆಂಡತಿ ರಾಜ್ಯ ಆಳ್ಬೋದು ಅಂತ ಪ್ರಪಂಚಕ್ಕೆ ತೋರಿಸಿಕೊಟ್ಟ ರಾಜ್ಯ ಕಣಯ್ಯ ಬಿಹಾರ. ಅದನ್ನು ತೋರಿಸಿಕೊಟ್ಟವ್ರು ಯಾವ ಡಿಗ್ರಿ ಹೊಂದಿದ್ರಯ್ಯಾ? ಸುಮ್ಮನೆ ಎಜುಕೇಶನ್ ಅಂತ್ಹೇಳಿ ದುಡ್ಡು, ಟೈಮು ವೇಸ್ಟ್ ಮಾಡಬಾರದು. ಲೆಕ್ಕದ ಲೆಕ್ಕಾನೇ ಬೇರೆ, ಮಿನಿಸ್ಟ್ರಿಗಳ ಲೆಕ್ಕಾನೇ ಬೇರೆ” ನುಡಿದರು ಸುಳ್ಳೂ ಯಾದವ್.

“ತಂತ್ರಜ್ಞಾನ ಸಚಿವ?”

“ಅದೊಂದಕ್ಕೆ ಮಾತ್ರ ಬಿಬಿಎಂ ಆಗಿರಬೇಕು.”

“ಬ್ಯುಸಿನೆಸ್ ಮ್ಯಾನೇಜ್‌ಮೆಂಟೇ?”

“ಅಲ್ಲ. ಬ್ಯಾಚುಲರ್ ಇನ್ ಬಂಧನಾಸ್ ಎಂಡ್ ಮಾಟಮಂತ್ರಾಸ್. ಅಷ್ಟ ದಿಗ್ಬಂಧನ, ಶಾಕಿನಿ-ಡಾಕಿನಿ ಬಂಧನಗಳಲ್ಲಿ ಎಕ್ಸ್‌ಪರ್ಟೈಸ್ ಇರಬೇಕು. ಮಾಟ, ಮಂತ್ರಗಳಲ್ಲಿ ಮಿನಿಮಮ್ ನಿಂಬೆಹಣ್ಣಿನಲ್ಲಿ ಮ್ಯಾಕ್ಸಿಮಮ್ ಹುಳಿ ಹಿಂಡುವಂತಹ ತಾಕತ್ತಿರಬೇಕು. ಅದಕ್ಕೇ ಈ ಬಿಬಿಎಂ”

“ಎಲ್ಲಿ ದೊರೆಯುತ್ತದೆ ಈ ಬಿಬಿಎಂ?”

“ಕೆಐಎಂಟಿ”

“ಅಂದರೆ?”

“ಕೇರಳ ಇಂಸ್ಟಿಟ್ಯೂಟ್ ಆಫ್ ಮಂತ್ರ & ತಂತ್ರ”

“ಇವೆಲ್ಲ ಸುಳ್ಳಲ್ಲವೇ... ಇವುಗಳಿಂದ ಏನು ಪ್ರಯೋಜನ?”

“ಮೂಢ! ಹೋಗಿ ನಿಮ್ಮ ಮಾಜಿ ಮುಖ್ಯಮಂತ್ರಿಗಳನ್ನು ಕೇಳು. ಅವರ ಕಾಲದಲ್ಲಿ ವಿದಾನಸೌಧದ ಸುತ್ತ ಹರಡಿರುತ್ತಿದ್ದ ಆರತಿಯ ಕೆರೆ, ನಿಂಬೆಯ ಗುಡ್ಡ, ಮಡಕೆಚೂರುಗಳ ವಿಸ್ತೀರ್ಣವೇ ಇವುಗಳ ಸಾಮರ್ಥ್ಯಕ್ಕೆ ಸಾಕ್ಷಿ”

“ಅಟ್ ಲೀಸ್ಟ್ ಕಾನೂನು ಸಚಿವರಾದರೂ ವಿದ್ಯಾವಂತರಾಗಿರಬೇಕಲ್ಲವೇ?”

“ನಿನ್ನ ಸೆಲ್‌ಫೋನ್ ಚೆನ್ನಾಗಿದೆ. ಅದನ್ನು ಪೀಸ್ ಪೀಸ್ ಮಾಡಿಕೊಡ್ತೀಯಾ?”

“ಇಲ್ಲಪ್ಪ.”

“ಹಾಗೆಯೇ ಈ ಮಂತ್ರಿಗಳೂ ಸಹ. ಕಾನೂನಿನ ಬಗ್ಗೆ ಓದಿದರೆ ಅದರ ಬಗ್ಗೆ ಅಟ್ಯಾಚ್‌ಮೆಂಟ್ ಮೂಡಿ ಮೆಟ್ಟಲು, ಮುರಿಯಲು ಕಷ್ಟವಾಗುವುದರಿಂದ ವಿದ್ಯೆಯಿಂದ ದೂರವಿರುವುದೇ ಸೂಕ್ತ.”

“ಆದರೂ... ಸುಳ್ಳೂಪ್ರಸಾದರೇ, ವಿದ್ಯಾ ದದಾತಿ ವಿನಯಂ, ವಿನಯಾತ್ ಯಾತಿ ಪಾತ್ರತಾಮ್ ಎಂದಿದೆಯಲ್ಲವೇ? ವಿದ್ಯೆಯಿಂದ ವಿನಯ, ವಿನಯದಿಂದ ಅರ್ಹತೆ”

“ಅದು ಸಜ್ಜನರಿಗೆ. ಸಚಿವರ ಮಂತ್ರವೇ ಬೇರೆ”

“ಏನು?”

“ದುರ್ವಿದ್ಯಾ ದದಾತಿ ದುರ್ವಿನಯಂ. ದುರ್ವಿನಯಾತ್ ಯಾತಿ ಮಂತ್ರಿತ್ವಂ ದುರ್ವಿದ್ಯೆಯಿಂದ ಅಹಂಕಾರ, ಅಹಂಕಾರದಿಂದ ಮಂತ್ರಿತ್ವ. ನಿನಗೊಂದು ಸಜೆಷನ್.”

“ಏನು?”

“ನಿನ್ನ ಸರ್ಟಿಫಿಕೇಟುಗಳನ್ನೆಲ್ಲ ರಿಟರ್ನ್ ಮಾಡಿ ಅನಕ್ಷರಸ್ಥನೆಂದು ಅಫಿಡವಿಟ್ ಮಾಡಿಸಿಕೊಂಡು ಬಾ. ನಿನಗೂ ಒಂದು ಮಂತ್ರಿಪದವಿ ಕೊಡಿಸುತ್ತೇನೆ”

ನಾನು ನನ್ನ ಸರ್ಟಿಫಿಕೇಟುಗಳನ್ನೆಲ್ಲಾ ಒಟ್ಟುಮಾಡಲು ಆರಂಭಿಸಿದೆ. ▪

ಕ್ವೀನ್ಸ್ ಲ್ಯಾಂಡ್ ರಾಜ್ಯ ಪುಷ್ಪ – ಕುಕ್ ಟೌನ್ ಆರ್ಕಿಡ್

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ರಾಜ್ಯವೊಂದಾದ ಕ್ವೀನ್ಸ್-ಲ್ಯಾಂಡಿನ ಪುಷ್ಪ ಲಾಂಛನವಾಗಿರುವ ಕುಕ್ ಟೌನ್ ಆರ್ಕಿಡ್ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಡೆಂಡ್ರೋಬಿಯಂ ಫಲೇನೋಪ್ಸಿಸ್"
- ಸಂಸ್ಕೃತದಲ್ಲಿ ವಂದಾಕ ಪುಷ್ಪವೆನ್ನುವ ಜಾತಿಗೆ ಇದು ಸೇರಿದ್ದಾಗಿದೆ
- ಹೆಚ್ಚೆಂದರೆ ಮೀಟರ್ ಎತ್ತರಕ್ಕೆ ಬೆಳೆಯುವ ಈ ಸಸ್ಯವು ೩-೨೦ ಜಲ್ಲೆಯಾಕಾರದ ರಂಬೆಗಳನ್ನು ಹೊಂದಿರುತ್ತವೆ. ಎಲೆಗಳು ಭರ್ಜಿಯ ಆಕೃತಿಯನ್ನು ಹೋಲುತ್ತವೆ
- ವ್ಯಪ್ಪೋಡೆಸ್ ಎಂಬ ಗುಂಪಿಗೆ ಬಹಳ ಹೋಲುವ ಈ ಹೂವು, ಗುಲಾಬಿ ಬಣ್ಣ ಅಥವಾ ನೇರಳೆ ಬಣ್ಣದಲ್ಲಿ ಹೇರಳವಾಗಿ ಸಿಗುತ್ತವೆ. ಬಿಳೀ ಬಣ್ಣದ್ದೂ ಹಲವೆಡೆ ದೊರಕುತ್ತವೆ
- ಕ್ವೀನ್ಸ್ ಲ್ಯಾಂಡಿನ ರಾಜ್ಯ ಪುಷ್ಪ ಲಾಂಛನವಾಗಿ ೧೯೫೯ ರಲ್ಲಿ ಅಂಗೀಕರಿಸಲಾಯಿತು.
- ಕೊಳವೆಯಾಕಾರದ ಕಾಂಡದಿಂದ ಅರಳುವ ಹೂವುಗಳು ಒಟ್ಟೊಟ್ಟಿಗೆ ೧೦-೨೦ ರಂತೆ ಇರುತ್ತವೆ.
- ಈ ಹೂವಿಗೆ ಒಣ ಹವೆ ಹೆಚ್ಚು ಆಪ್ತ ಮತ್ತು ಹೆಚ್ಚಾಗಿ ಕಾಡು ಪ್ರದೇಶದಲ್ಲಿ ಬೆಳೆಯುತ್ತದೆ ▪

ಕುಕ್ ಟೌನ್ ಆರ್ಕಿಡ್ ಹೂವಿನ ಗಿಡ

ಆಸ್ಟ್ರೇಲಿಯಾದ ಅಂಚೆ ಚೀಟಿಯಲ್ಲಿ ಕುಕ್ ಟೌನ್ ಆರ್ಕಿಡ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಸುಂದರಾಂಗ !

ಕನಕಾಪುರ ನಾರಾಯಣ

ಅದೊಂದು ದೊಡ್ಡ ಕಾಡು, ಜಿಂಕೆಯೊಂದು ನದಿಯಲ್ಲಿ ನಿರ್ಭಯವಾಗಿ ನೀರು ಕುಡಿಯುತ್ತಿತ್ತು. ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಂಡುಕೊಳ್ಳುತ್ತಾ ಆನಂದದಿಂದ ತಲೆಯೆತ್ತಿ "ಆಹಾ ನನ್ನ ಎರಡೂ ಕೊಂಬುಗಳು ಅದೆಷ್ಟು ಸುಂದರ" ಮತ್ತೆ ನೀರಿನಲ್ಲಿ ತನ್ನ ಕೋಡನ್ನು ಕಂಡು "ಅರೆ ಎರಡೂ ಬೇರೆ ಕೊಂಬಾದರೂ ಅದೆಷ್ಟು ಹೋಲಿಕೆ! ಅದೆಷ್ಟು ಕವಲುಗಳು! ಹರಿತವಾದ ಕೊನೆಗಳು! ಅದೆಷ್ಟು ಬಲಿಷ್ಟ! ಎಂದು ತಲೆ ಎತ್ತಿ ಸುತ್ತಲೂ ನೋಡಿ ಮತ್ತೆಮತ್ತೆ ನೀರಿನಲ್ಲಿ ತನ್ನ ಬಿಂಬವನ್ನು ಜಂಭದಿಂದ ನೋಡಿಕೊಂಡಿತು. ಹಾಗೇ ಜಿಂಕೆ ನೀರುಕುಡಿಯಲು ತಲೆ ಬಗ್ಗಿಸಿದಾಗ ತನ್ನ ಕಾಲುಗಳನ್ನು ಒಮ್ಮೆ ನೋಡಿಕೊಂಡಿತು.

"ಅರೆರೆ ನನ್ನ ಕಾಲುಗಳು ಮಾತ್ರ ಅದೆಷ್ಟು ಸಣ್ಣದಾಗಿವೆ, ಛೆ! ಥೂ, ಸ್ವಲ್ಪವೂ ಸುಂದರವಾಗಿ ಇಲ್ಲ! ನನ್ನ ಕೊಂಬೇ ಚೆನ್ನ, ನನ್ನ ಕಾಲುಗಳೇಕೋ ಬಡಕಲು ಸುಂದರವಾಗೇ ಇಲ್ಲ" ಎಂದು ತನ್ನಷ್ಟಕ್ಕೆ ತಾನೇ ಬೇಸರವೂ ಪಟ್ಟಿತು. ಹೀಗೇ ನೀರು ಕುಡಿಯಲು ಬಂದಾಗಲೆಲ್ಲಾ ತನ್ನ ಸುಂದರವಾದ ಅಂಗವಾದ ಕೊಂಬುಗಳನ್ನು ಕಂಡು ಹೆಮ್ಮೆಯಿಂದ ಬಾಳುತ್ತಿದ್ದ ಜಿಂಕೆ ತನ್ನ ಕಾಲುಗಳನ್ನು ನೋಡಿಯೂ ನೋಡದಂತಿತ್ತು. ಹೀಗಿರಲು ಒಂದು ದಿನ ಹುಲ್ಲು ಮೇಯುತ್ತಿದ್ದ ಜಿಂಕೆಯನ್ನು ತೋಳವೊಂದು ಅಟ್ಟಿಸಿಕೊಂಡು ಬಂದಿತು. ಜಿಂಕೆ ವೇಗದಿಂದ ಓಡತೊಡಗಿತು, ಗಿಡ-ಮರ-ಪೊದೆಗಳನ್ನು ನುಸುಳಿ ಓಡುವಾಗ ಪೊದೆಯೊಂದಕ್ಕೆ ಅದರ ಕೊಂಬುಗಳು ಸಿಲುಕಿ ಬಿಡಿಸಿಕೊಳ್ಳಲಾಗದೆ ವಿಲಿವಿಲಿ ಒದ್ದಾಡತೊಡಗಿತು. ಇನ್ನೇನೆ ತೋಳ ಇದರ ವಾಸನೆ ಗ್ರಹಿಸಿ ಸಮೀಪಿಸುತ್ತಿತ್ತು. ಜಿಂಕೆಗೆ ತೋಳ ಬರುತ್ತಿರುವುದು ಕಾಣುತ್ತಿತ್ತು. ಪೊದೆಯಿಂದ ಬಿಡಿಸಿಕೊಳ್ಳಲಾಗದೆ ಜಿಂಕೆ ಸೆಣಸಾಡುತ್ತಿತ್ತು, ಸುಲಭವಾಗಿ ತೋಳ ವಾಸನೆ ಗ್ರಹಿಸಿ ಜಿಂಕೆಯ ಇರುವಲ್ಲಿಗೆ ಬಂದೇ ಬಿಟ್ಟಿತು. ಅದನ್ನು ಕಂಡು ಜಿಂಕೆಗೆ ಮತ್ತಷ್ಟು ಗಾಬರಿಯಾಯಿತು. ಪ್ರಾಣ ಕಳೆದುಕೊಳ್ಳುವ ಸಮಯ ತೋಳಗಳು ಹಿಂಡು ಹಿಂಡಾಗಿ ಬಂದು ಪೊದೆಯಲ್ಲಿ ಸಿಕ್ಕಿಬಿದ್ದ ತನ್ನನ್ನು ಸುಲಭವಾಗಿ ಬೇಟೆಯಾಡಿ ಕಾಲು, ಬೆನ್ನು, ಹೊಟ್ಟೆ, ತಲೆ ಎಲ್ಲವನ್ನೂ ಕಿತ್ತುಕಿತ್ತು ತಿನ್ನುವ ದೃಶ್ಯವನ್ನು ಒಮ್ಮೆ ನೆನೆಯಿತು, ಕಾಲು! ಅರೆ ಕಾಲು ಎಂದು ತಕ್ಷಣ ತನ್ನ ಬಲಿಷ್ಟವಾದ ಕಾಲುಗಳನ್ನು ಹಿಂದಕ್ಕೆ ಬಾಗಿಸಿ ತನ್ನೆಲ್ಲಾ ಶಕ್ತಿಮೀರಿ ತಳ್ಳುತ್ತಾ ಹಿಂದೆ ಮುಂದೆ ಜಗ್ಗುತ್ತಾ ಪೊದೆಯಿಂದ ಕೋಡನ್ನು ಬಿಡಿಸಿಕೊಂಡು ಛಂಗನೆ ನೆಗೆದು ಅಲ್ಲಿಂದ ಪರಾರಿಯಾಯಿತು. ದೂರದ ಹುಲ್ಲು ಪ್ರದೇಶಕ್ಕೆ ಬಂದು ಭಯದಿಂದ ಹಿಂದೆ ನೋಡುತ್ತಾ ನಿಂತಿತು, ಕಾಲುಗಳು ನಡುಗುತ್ತಿತ್ತು. ಒಮ್ಮೆ ಅದರಕಡೆ ನೋಡಿಕೊಂಡು ಹೆಮ್ಮೆ ಪಟ್ಟಿತು, ನಾನು ನನ್ನ ಕೊಂಬಿನ ಸೌಂದರ್ಯವನ್ನು ಕಂಡು ಜಂಭದಿಂದಿದ್ದೆ. ಆದರೆ ಅದರಿಂದಲೇ ಈದಿನ ನನಗೆ ತೊಂದರೆಯಾಯಿತು, ಅದೇ ಕಾಲುಗಳನ್ನು ನೋಡಿ ಅಸಹ್ಯ ಪಡುತ್ತಿದ್ದೆ. ಅವೇ ನನ್ನನ್ನು ಅಪಾಯದಿಂದ ಪಾರು ಮಾಡಿತು ಎನ್ನುವುದನ್ನರಿಯಿತು. ▪

ರ ಸಿ ಪಿ ಕೊ ಡ್ತೀ ರಾ!

ಹೆಸರ ಬೇಳೆ ಪಾನಕ

ಬೇಕಾಗುವ ಸಾಮಗ್ರಿಗಳು

- ಹೆಸರು ಬೇಳೆ ಎರಡು ಚಮಚ
- ಉಪ್ಪು ಚಿಟಿಕೆ
- ಬೆಲ್ಲ ನಾಲ್ಕು ಚಮಚ
- ಏಲಕ್ಕಿ ಪುಡಿ ಚಿಟಿಕೆ

ಮಾಡುವ ವಿಧಾನ

- ಬೇಳೆಯನ್ನು ಎರಡು ಘಂಟೆ ನೆನೆಸಿ,ಎರಡು ಬಾರಿ ತೊಳೆದು ಶುಚಿ ಮಾಡಿಕೊಳ್ಳಿ
- ಬೆಲ್ಲ,ಉಪ್ಪು,ಏಲಕ್ಕಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ
- ನೀರು ಹಾಕಿ ತೆಳ್ಳಗೆ ಮಾಡಿ ಕದಡಿ ಕುಡಿಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಂದರ ಲ್ಲೊಂದು ಒಗಟು

೧. ಮೂರಕ್ಷರದ ಈ ಪದವು ಸಮರ ಮಾಡುತ್ತಿಲ್ಲ ಕೆಲಸ ಮಾಡುತ್ತಿದೆ
೨. ಮೊದಲೆರೆಡಕ್ಷರವು ದೇಹದೊಂದು ಅಂಗವು
೩. ಕೊನೆಯೆರಡು ಕೂಡಿದರೆ ಸಮರದ ರಂಗವು
೪. ಮೊದಲಿನ ಅಕ್ಷರಕ್ಕೆ ಕೊನೆಯಕ್ಷರ ಸೇರಿಸಿದರೆ ಅತಿ ಚಿಕ್ಕದಾಗುತ್ತದೆ

ಉತ್ತರಕ್ಕೆ ಪುಟ ೯ ನೋಡಿ

ಪ್ರೀತಿ ...

ಪ್ರೀತಿಯ ಅರ್ಥ ಹೇಳು ಪ್ರಿಯ
ಪ್ರೀತಿ ಎಂದರೆ ಏನು ಪ್ರಿಯ

ಅಂದಕೆ ಗಂಧವ ತೇಯುವುದೇ
ಒಲವಿನ ಮೇವಿಗೆ ಕಾಯುವುದೇ
ಚೆಲುವಿನ ಕನಸಿಗೆ ಹಾಯುವುದೇ
ನೋವಲಿ ಎದೆಯೊಳು ಬೇಯುವುದೇ

ತಿಂಗಳ ಚುಕ್ಕಿ ಕಂಗಳ ಕುಕ್ಕಿ
ಅಂಗಳದಲ್ಲಿ ತೇಲುವುದೇ
ಹಂಗಿನಲಿ ನಿನ್ನಂಗದಲಿ
ಸಂಗದಲಿ ನಾ ಸೋಲುವುದೇ

ಬಂಧನದಲಿ ನಾ ಬಾಳುವುದೇ
ಬಿಂದುವಿನಲಿ ನಾ ತಾಳುವುದೇ
ಅಂದಿನ ಮಾತಿನ ಚಂದನದಲ್ಲಿ
ಮಿಂದು ಮಿಂದು ನಾನೇಳುವುದೇ

ಮಗುವನು ಇತ್ತು ಮೆರೆಯುವುದೇ
ನಗುವನು ತೆತ್ತು ಸರಿಯುವುದೇ
ಹಗೆಯನು ಹೀರಿ ಹೊಗೆಯನು ತೂರಿ
ಬಗೆ ಬಗೆಯಾಗಿ ಉರಿಯುವುದೇ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ೧೯೩೩ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾಗಿ, ಇಂದಿಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಕನ್ನಡದ ಹೆಮ್ಮೆಯ ಪ್ರಕಟಣಾ ಸಂಸ್ಥೆ ಯಾವುದು?

೨. ಜಡಭರತ ಎಂದೇ ಪ್ರಸಿದ್ಧರಾದ ಖ್ಯಾತ ನಾಟಕಕಾರರ ನಿಜ ಹೆಸರೇನು?

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಕರಣ ೨. ಕರ ೩. ರಣ ೪. ಕಣ

ಹಾಸ್ಯ ಚಿಲುಮೆ

ತಿಮ್ಮನ ಹೆಂಡತಿ: ನಿನ್ನ ಗಂಡ ದಿನಾ ಕುಡ್ಕೊಂಡು ಬರ್ತಾನಲ್ಲಾ ನೀನು ಕೇಳಲ್ವಾ?

ಗುಂಡನ ಹೆಂಡತಿ: ಕೇಳ್ದೆ.....ಕೊಡಲ್ಲಾ ಅಂದ್ರು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ನಾವು ಉಸಿರನ್ನಾಡಲು ಉಳಿಸಿ ಬೆಳೆಸಬೇಕಾದ ಬಣ್ಣ?

೨. ಪೂಜಾ ಸಾಮಗ್ರಿಗಳು ಹಾಗೂ
ನಾಟಿ ಔಷಧಗಳನ್ನು ಮಾರುವ ಸ್ಥಳ.

೩. ಭೋಧಿ ವೃಕ್ಷದ ಕೆಳಗೆ ಕುಳಿತದಕ್ಕೆ, ಬುದ್ಧನಿಗಾದದ್ದೇನು?

೪. ಕುಳಿತು ಹಾಡಲು ಕೋಗಿಲೆ ಬಯಸುವ
ಹಣ್ಣಿನ ಮರ ಕಿರಿದಾಗಿ ಬಿಟ್ಟಿದೆಯಲ್ಲ!

5. ಧಾರ್ಮಿಕ ಮಾರ್ಗಗಳ ಬಗ್ಗೆ ಬಾಜಿ ಕಟ್ಟುವಿರೇನು?

೬. ದುರಾದೃಷ್ಟ ಹೆಚ್ಚಾಗಿ ಬೆಂಕಿಗೆ ಬೀಳುವ ಮುನ್ನ ಇದ್ದ ಜಾಗ?

ಉತ್ತರ: ಚಿತ್ತವನ್ನು ಸೂರೆಗೊಳ್ಳುವ ಪುಸ್ತಕಗಳ ಹಾರ,
ಕನ್ನಡ ಸಾಹಿತ್ಯ ಲೋಕದ ಆಸ್ತಿ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಡಿಸೆಂಬರ್ ೩೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ನವೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ಬಿ.ಆರ್.ವತ್ಸಲ ದ್ವಾರಕನಾಥ್, ಕೆ.ಜಿ.ಎಫ್.
- ರಾಘವೇಂದ್ರ ಮೂರ್ತಿ, ಬೆಂಗಳೂರು
- ರಾಜೇಶ್ವರಿ, ಸಿದ್ದಿ
- ಹರಿಣಿ ರಾವ್, ನವದೆಹಲಿ

ನವೆಂಬರ್ ತಿಂಗಳ ಪದಪುಂಜದ ಉತ್ತರ

೧. ಬಯಸಿದ್ದನ್ನೆಲ್ಲಾ ಕೊಡುವ ಮರ.

ಕ	ಲ್ಪ	ವೃ	ಕ್ಷ

೨. ಕಣ್ಣು ಕೊಟ್ಟ ದೇವರು.

ಮಾ	ವ

೩. ಕರ್ನಾಟಕ, ತಮಿಳ್ನಾಡುಗಳ ನಡುವೆ
ಆಗಾಗ್ಗೆ ಬಿಸಿಯನ್ನೇರಿಸುವವಳು.

ಕಾ	ವೇ	ರಿ

೪. ಎಲ್ಲ ಕಡೆಯಲ್ಲಿಯೂ ನಾನಿದ್ದೇನೆ ಎಂದು
ಹೇಳುವ ಈ ಪುಟ್ಟ ಶ್ರಮಜೀವಿ.

ಇ	ರು	ವೆ

೫. ಉರಗದ ಬಾಯಿಗೆ ಸಿಲುಕಿದರೂ ಮತ್ತೆ
ಹೋಗಿ ಮೇಲೇರಿ ಗೆಲ್ಲಬೇಕೆಂದು ಆಡುವ ಆಟ.

ಹಾ	ವು	ಏ	ಣಿ	ಆ	ಟ

ಉತ್ತರ: ಎರಡು ಬೆಟ್ಟಗಳ ನಡುವಿನ ಪ್ರದೇಶವನ್ನು
ಕ್ರಯಕ್ಕೆ ಕೊಟ್ಟುಬಿಡಿ ಎಂದು ಹೇಳುತ್ತಿದೆ ಈ ಜಲಾಶಯ.

ಮಾ	ರಿ	ಕ	ಣಿ	ವೆ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಸುಗಮ ಕನ್ನಡ ಕೂಟದ ದಶಮಾನೋತ್ಸವ ಸಮಾರಂಭದಲ್ಲಿದ್ದೊಂದ ರಂಗೋಲಿ

ಹಲ್ಲು ಮತ್ತು ಅನುಮಾನಗಳ ಕಲ್ಲು

ಬೇಲೂರು ರಾಮಮೂರ್ತಿ

ಬೊಚ್ಚ ಬಾಯಿನವರು ಬಿಚ್ಚು ಬಾಯಿಂದ ಸ್ವಾಗತಿಸುವಂಥ ಸುದ್ದಿ ಬಂದಿದೆ. ಅರವತ್ತು ತುಂಬಿ ಬಡತನರೇಖೆಯಿಂದ ಮೇಲಿರುವವರಿಗೂ ಸರ್ಕಾರ ಹಲ್ಲುಸೆಟ್ ಕೊಡುತ್ತೆ ಅಂತ ಕೆಲವು ತಿಂಗಳುಗಳ ಹಿಂದೆ ವರದಿಯಾಗಿತ್ತು. ಸರ್ಕಾರ ಕೊಡೋ ಹಲ್ಲು ಸೆಟ್ ಕಟ್ಟಿಸಿಕೊಂಡವರನ್ನು ಹಲ್ಲು ಹಿಡಿದು ಮಾತಾಡು ಎನ್ನಬೇಕು. ಇಲ್ಲದಿದ್ದರೆ ಅದು ಉದುರೇ ಹೋಗಬಹುದು. ಹಲ್ಲಿದ್ದವರಿಗೆ ಕಡ್ಲೆ ಇಲ್ಲ ಕಡ್ಲೆ ಇದ್ದವರಿಗೆ ಹಲ್ಲಿಲ್ಲ ಎನ್ನೋ ಗಾದೆನೇ ಸುಳ್ಳು ಮಾಡೋಕೆ ಹೊರಟಿದೆ ಸರ್ಕಾರ. ಇಗೋ ಇಲ್ಲಿ ಹಲ್ಲಿದೆ, ಎಷ್ಟು ಬೇಕಾದರೂ ಕಡಲೆ ತಿನ್ನಿ ಎನ್ನುತ್ತಿದೆ. ಹಲ್ಲಿಲ್ಲದೇ ಇರೋದರಿಂದ ಮನೇಲಿ ಚಕ್ಕುಲಿ ಮಾಡು, ಕೋಡುಬಳೆ ಮಾಡು, ಕಲ್ಲು ಉಂಡೆ ಮಾಡು ಅಂತ ಪೀಡಿಸೋ ಗಂಡಂದಿರಿಂದ ಮುಕ್ತಿಗೊಂಡಿದ್ದ ಹೆಂಗಸರೆಲ್ಲ ಈಗ ಮತ್ತೆ ಅಂಥಾ ಬೇಡಿಕೆಗಳು ಬರೋಕೆ ಶುರುವಾದರೆ ಸರ್ಕಾರಕ್ಕೆ ಹಿಡಿಶಾಪ ಹಾಕಬಹುದು. ಕಟ್ಟಿಸಿಕೊಂಡಿರೋ ಹಲ್ಲುಗಳಿಂದ ಇಂಥಾ ಗಟ್ಟಿ ಆಹಾರಗಳನ್ನು ತಿನ್ನಬಹುದೋ ಇಲ್ಲವೋ ಗೊತ್ತಿಲ್ಲ. ಕಟ್ಟಿಸಿಕೊಂಡ ಹಲ್ಲಿನಿಂದ ತಾಳಿ ಕಟ್ಟಿಸಿಕೊಂಡವಳು ಕಚ್ಚಿದರೆ ರಕ್ತ ಬರುತ್ತೋ, ಉದುತ್ತೋ, ಮಾರ್ಕು ಬೀಳುತ್ತೋ ಗೊತ್ತಿಲ್ಲ. ಅರವತ್ತಾಗಿದ್ದರೂ ಇನ್ನೂ ಹಲ್ಲು ಗಟ್ಟಿಯಾಗಿದ್ದವರು ಈ ಬಗೆಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲವೇನೋ. ಅರವತ್ತಾಯಿತಾ ತಗೋಳಿ ಒಂದು ಹಲ್ಲುಸೆಟ್ಟು. ನಿಮ್ಮ ಒರಿಜಿನಲ್ ಹಲ್ಲು ಉದುರಿದ ಮೇಲೆ ಇದನ್ನು ಕಟ್ಟಿಸಿಕೊಳ್ಳಿ ಅಂತ ಎಲ್ಲರಿಗೂ ಕೊಡ್ತಾರೋ ಗೊತ್ತಿಲ್ಲ. ಈ ಮೊದಲಾದರೆ ಅರವತ್ತಕ್ಕೆ ಅರಳು ಮರುಳಾಗುತ್ತಿತ್ತು, ಹಲ್ಲು ಉದುರಿರುತ್ತಿತ್ತು, ತಲೆಗೂದಲು ಬಿಳಿಯಾಗೋದು ಹೋಗಲಿ ಕೂದಲೇ ಇರುತ್ತಿರಲಿಲ್ಲ, ಕೈಗೆ ಕೋಲು ಬಂದಿರುತ್ತಿತ್ತು. ಜೀವನವೇ ಜಿಗುಪ್ಸೆ ಬಂದು ಅರವತ್ತೆರಡಕ್ಕೋ ಅರವತ್ಮೂರಕ್ಕೋ ಹೋಗೇಬಿಡುತ್ತಿದ್ದರು. ಈಗ ಹಾಗಲ್ಲ ಅರವತ್ತರಲ್ಲೂ ಯೌವನ ಚಿಗುರುತ್ತಿರುತ್ತದೆ. ಸೆಕ್ಸೀ ಈವನ್ ಅಟ್ ಸಿಕ್ಸ್ಟಿ. ಹಲ್ಲಗಳು ಬೊಂಬಾಟಾಗಿರುತ್ವೆ. ಅಂಥವರಿಗೆ ಸರ್ಕಾರ ಕೊಡೋ ಹಲ್‌ಸೆಟ್ಟಿಂದ ಏನು ಪ್ರಯೋಜನ.

ಎಂಥಾ ಹಲ್ಲುಸೆಟ್ ಕೊಡುತ್ತಾರೆ ಎನ್ನೋದು ಇನ್ನೊಂದು ಚಿಂತೆ. ನನಗೆ ದಾಳಿಂಬೆ ಕಾಳಿನಂಥ ಹಲ್ಲುಗಳಿರುವ ಸೆಟ್ ಬೇಕು, ನನ್ನ ಮುಖ ಲಕ್ಷಣಕ್ಕೆ ತುಸು ಅಗಲದ ಉದ್ದದ ಹಲ್ಲು ಚನ್ನಾಗಿ ಕಾಣುತ್ತೆ, ನನಗೆ ಎರಡೇ ದವಡೆ ಹಲ್ಲು ಉದುರಿದೆ ಅದನ್ನು ಮಾತ್ರ ಕಟ್ಟಿಸಿಕೊಡಿ, ಮುಂದಿನ ನಾಲ್ಕು ಹಲ್ಲು ತುಸು ಅಗಲಗಲವಾಗಿರಲಿ, ಮುಂತಾದ ಬೇಡಿಕೆಗಳನ್ನು ಸರ್ಕಾರ ಈಡೇರಿಸುವುದೇ? ಬೊಚ್ಚು ಬಾಯಿದ್ದವರು ಇನ್ನೊಬ್ಬರೊಡನೆ ಮಾತಾಡುವಾಗಲೂ ನಗುವಾಗಲೂ ತುಂಬಾ ಸಂಕೋಚ ಮಾಡಿಕೊಳ್ಳುವಂಥ ದಿನಗಳು ಇನ್ನಿಲ್ಲ. ಸರ್ಕಾರ ಕೊಟ್ಟ ಹಲ್ಲುಸೆಟ್ ಹಾಕಿಕೊಂಡು ಇನ್ನು ಧಾರಾಳವಾಗಿ ನಗಬಹುದು. ಸರ್ಕಾರದ ವಿವಿಧ ಮೂರ್ಖತನದ ರೀತಿನೀತಿಗಳನ್ನೂ ನೋಡಿ ನಗಬಹುದು, ಶಾಸಕರು, ಮಂತ್ರಿಗಳು ನಡೆಸುವ ಚಕ್ಕಂದ,ಚೆಲ್ಲಾಟಗಳನ್ನು ನೋಡಿ ನಗಬಹುದು, ರಾಜಕೀಯ ನಾಯಕರು ಕೊಡೋ ಒಂದೊಕ್ಕೊಂದು ಸಂಬಂಧವಿಲ್ಲದ ಹೇಳಿಕೆಗಳನ್ನು ನೋಡಿ ನಗಬಹುದು. ಹಲ್ಲು ಕಟ್ಟಿಸಿಕೊಂಡ ಮೇಲೆ ನಗೋಕೆ ಹಿಂಜರಿಯಬೇಕಾಗಿಲ್ಲ. ಹಲ್ಲುಸೆಟ್ ಕೊಡುವ ನೆಪದಲ್ಲಿ ಸರ್ಕಾರ ಜನತೆಗೆ ನಗುವ ಮನೋಭಾವವನ್ನು ಕಲಿಸುತ್ತಿದೆಯೇ?

ಸರ್ಕಾರ ಹಲ್ಲುಸೆಟ್ ಕೊಟ್ಟ ಮೇಲೆ ಇನ್ನೊಂದು ಸಮಸ್ಯೆಯೂ ಪುರುವಾಗುತ್ತದೆ. ಈಗ ಬಾಯಲ್ಲಿ ಒಂದೂ ಹಲ್ಲುಗಳಿಲ್ಲಿದ ಬೊಚ್ಚುಬಾಯಿನವರು ಕೈಗೆ ಸ್ವಲ್ಪ ಪೇಸ್ಟ್ ಹಾಕಿಕೊಂಡು ಉಜ್ಜಿಬಿಡುತ್ತಾರೆ. ಆದರೆ ಹಲ್ಲುಸೆಟ್ ಹಾಕಿಕೊಂಡ ಮೇಲೆ ಅದು ಬಾಯಲ್ಲಿರುವಾಗಲೋ ಅಥವಾ ಅದನ್ನು ತೆಗೆದಿಟ್ಟಿರುವಾಗಲೋ ಹಲ್ಲು ಉಜ್ಜಲೇ ಬೇಕು. ಅದಕ್ಕೆ ಪೇಸ್ಟ ಜೊತೆ ಬ್ರಷ್ಷೂ ಬೇಕು. ಅದಕ್ಕೆ ಹೆಚ್ಚಿನ ಖರ್ಚು. ಹಲ್ಲುಸೆಟ್ ಕೊಡೋ ಸರ್ಕಾರ ತಿಂಗಳಾ ತಿಂಗಳಾ ಪೇಸ್ಟ್ ಮತ್ತು ಬ್ರಷ್ ಅಲೋಯನ್ಸ್ ಕೊಡುತ್ತೋ ಇಲ್ಲವೋ ಗೊತ್ತಿಲ್ಲ. ನಮಗೆ ಈ ಹೆಚ್ಚಿನ ಖರ್ಚು ನಿಭಾಯಿಸೋ ಶಕ್ತಿ ಇಲ್ಲ. ಅದರಿಂದ ನಾವು ಬೊಚ್ಚು ಬಾಯಲ್ಲೇ ಇರ್ತೀವಿ ಅಂತ ಕೆಲವರಾದರೂ ಹೇಳಬಹುದು. ನಮ್ಮ ಯಜಮಾನರ ಬಾಯಲ್ಲಿ ಈಗ ಹಲ್ಲು ಇಲ್ಲದಿರುವುದರಿಂದ ಅವರ ಬಾಯಲ್ಲಿ ನಾನು ಬೆಟ್ಟಿಡಬಹುದು. ಆದರೆ ಹಲ್ಲುಸೆಟ್ ಹಾಕಿಕೊಂಡರೆ ಹಾಗೆ ಮಾಡೋಕಾಗಲ್ಲ ಅಂತ ಕೆಲವು ಮಹಿಳಾ ಮಣಿಗಳಾದರೂ ನಮಗೆ ಹಲ್‌ಸೆಟ್ ಬೇಡ ಎನ್ನಬಹುದೇ?

ಆದರೆ ಸರ್ಕಾರದ ಇಂಥಾ ಸ್ಕೀಮಿಂದ ಕೆಲವರಿಗಾದರೂ ಉಪಯೋಗವಾಗುತ್ತದೆ. ವಯಸ್ಸಾಗುತ್ತಾ ಬಂದಂತೆ ಸಿಹಿ ತಿಂದಿದ್ದರಿಂದಲೋ, ಧೂಮಪಾನದಿಂದಲೋ, ಹೊಗೆಸೊಪ್ಪಿನ ಪ್ರಭಾವದಿಂದಲೋ ಹಲ್ಲು ಹುಳುಕಾಗಿ, ಒಂದೊಂದು ಹಲ್ಲು ಒಂದೊಂದು ಬಣ್ಣವಾಗಿ, ಒಂದೊಂದು ಅಳತೆಯದಾಗಿ ಹಲ್ಲುಗಳಿಂದ ಮುಖವೇ ವಿಕಾರವಾಗಿದ್ದವರು ಸಮಾಧಾನಪಡಬಹುದು. ಏಕೆಂದರೆ ಅವರಿಗೆ ಒಂದೇ ಅಳತೆಯ ಹಲ್ಲುಸೆಟ್ ಸಿಗುತ್ತದೆ. ಇದರಿಂದ ಅವರ ಮುಖ ಮತ್ತೆ ಸಿಂಗಾರಗೊಳ್ಳುತ್ತದೆ. ಆದರೆ ಇಂಥವರಿಗೂ ಸರ್ಕಾರ ಹಲ್ಲುಸೆಟ್ ಕೊಡುತ್ತದೆಯೇ ಎನ್ನೋದು ಸ್ಪಷ್ಟವಾಗಿಲ್ಲ. ಅರವತ್ತು ತುಂಬಿದವರಿಗೆ ಹಲ್ಲು ಹೇಗೇ ಇದ್ದರೂ ಸರ್ಕಾರ ಹಲ್ಲುಸೆಟ್ ಕೊಡುತ್ತದೆಯೇ? ಅಥವಾ ಇರುವ ಎಲ್ಲಾ ಹಲ್ಲುಗಳೂ ಉದುರಿದ ನಂತರವೇ ಹಲ್ ಸೆಟ್ ಕೊಡುತ್ತದೆಯೇ? ಒಂದು ವೇಳೆ ಇನ್ನೂ ಕೆಲವು ಹಲ್ಲುಗಳಿರುವವರು ಅವುಗಳನ್ನು ಕೀಳಿಸಿಕೊಂಡು ಸರ್ಕಾರದಿಂದ ಹಲ್‌ಸೆಟ್ ತಗೋಬೇಕಾದರೆ, ಇರುವ ಹಲ್ಲುಗಳನ್ನು ಕೀಳಿಸುವ ಖರ್ಚನ್ನೂ ಸರ್ಕಾರ ಭರಿಸುತ್ತದೆಯೇ ಅಥವಾ ಅವರವರೇ ಭರಿಸಬೇಕೇ? ಒಂದು ವೇಳೆ ಹೀಗೆ ಖರ್ಚನ್ನು ಭರಿಸಬೇಕಾಗಿ ಬಂದರೆ ಅನುಕೂಲವಿಲ್ಲದವರು ಈಗ ನಮಗೆ ಹಲ್‌ಸೆಟ್ ಬೇಡ, ಎಲ್ಲಾ ಹಲ್ಲುಗಳೂ ತಾವಾಗೇ ಉದುರಿದ ಮೇಲೆ ತಗೋತೀವಿ ಅನ್ನಬಹುದೇ?

ಮುಂದಿನ ಪುಟ ನೋಡಿ ...

ಇಲ್ಲಾ ಅರವತ್ತಾದವರೆಲ್ಲರಿಗೂ ಸರ್ಕಾರವೇ ಇರುವ ಹಲ್ಲುಗಳನ್ನು ಕೀಳಿಸಿ ಹಲ್‌ಸೆಟ್ ಕೊಡುತ್ತದೆ ಅಂದ್ರೆ ಅರವತ್ತಾದವರೆಲ್ಲರೂ ಒಪ್ಪುತ್ತಾರೆಯೇ? ಹಲ್ಲು ಕೀಳುವಾಗ ಒಸಡಿಗೆ ತೊಂದರೆಯಾಗಿ, ರಕ್ತ ಬಂದು, ಇನ್ನೇನಾದರೂ ತೊಂದರೆ ಬಂದರೆ ಅಂಥಾದ್ದಿಕ್ಕೆ ತಗುಲುವ ವೈದ್ಯಕೀಯ ವೆಚ್ಚವನ್ನೂ ಸರ್ಕಾರ ಭರಿತುತ್ತದೆಯೇ ಗೊತ್ತಿಲ್ಲ. ಅಥವಾ ತಮ್ಮ ತಮ್ಮ ರೇಷನ್ ಕಾರ್ಡ್ ತಗೊಂಡು ಬಂದು ಒಂದೊಂದು ಹಲ್‌ಸೆಟ್ ತಗೊಂಡು ಹೋಗಿ ನಿಮಗೆ ಬೇಕಾದಾಗ ಕಟ್ಟಿಸಿಕೊಳ್ಳಿ ಅಂತ ಕೊಟ್ಟುಬಿಡುತ್ತದೆಯೇ? ಒಂದು ವೇಳೆ ಹಾಗೆ ಕೊಟ್ಟರೆ ಅವಶ್ಯಕತೆಯಿಲ್ಲದವರೂ ಹಲ್ ಸೆಟ್‌ತಗೊಂಡು ಬಂದು ಅದನ್ನು ಅರ್ಧ ಬೆಲೆಗೆ ಮಾರಿಕೊಳ್ಳುವುದಿಲ್ಲ ಅಂತ ಏನು ಗ್ಯಾರಂಟಿ.

ಒಬ್ಬ ದಂತವೈದ್ಯನನ್ನು ಏನು ಸ್ವಾಮಿ ನಿಮ್ಮಲ್ಲಿಗೆ ತರಹೇವಾರಿ ರೋಗಿಗಳು ಬರ್ತಾರೆ ಅವರೆಲ್ಲರ ಹಲ್ಲುಗಳನ್ನು ಕೀಳೋದು ನಿಮಗೆ ಸುಲಭವೇ ಅಂತ ಕೇಳಿದರಂತೆ. ಅದಕ್ಕೆ ದಂತವೈದ್ಯರು ನಾನು ಎಂಥಾ ರೋಗಿಗಳ ಹಲ್ಲುಗಳನ್ನು ಬೇಕಾದರೂ ಸುಲಭವಾಗಿ ಕಿತ್ತುಬಿಡುತ್ತೇನೆ. ಆದರೆ ಹಲ್ಲು ಕಿತ್ತ ಮೇಲೆ ಅವರಿಂದ ನನ್ನ ಫೀಸು ಕೀಳೋದೇ ತುಂಬಾ ಕಷ್ಟ ಅಂದರಂತೆ. ▪

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ವಿಜ್ಞಾನ

ಬಣ್ಣದ ಸ್ಪೋಟ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಹಾಲು
- ಅಗಲವಾದ ತಟ್ಟೆ, ವಿವಿಧ ಬಣ್ಣದ ಫುಡ್ ಕಲರ್
- ಪಾತ್ರೆ ತೊಳೆಯುವ ದ್ರಾವಣ (ಡಿಶ್ ವಾಶಿಂಗ್ ಲಿಕ್ವಿಡ್ ಸೋಪ್)
- ಸ್ವಲ್ಪ ಹತ್ತಿ (ಇಯರ್ ಬಡ್ಸ್ ಕೂಡ ಉಪಯೋಗಿಸಬಹುದು)

ವಿಧಾನ:

- ತಟ್ಟೆಯಲ್ಲಿ ಹಾಲು ಸುರಿದು ಒಂದೆರಡು ನಿಮಿಷ ಬಿಡಿ.
- ನಂತರ ಆದಷ್ಟು ಮಧ್ಯಭಾಗಕ್ಕೆ ಬಣ್ಣಗಳು ಬೆರೆತುಕೊಳ್ಳದಂತೆ ಒಂದಷ್ಟು ಅಂತರ ಬಿಟ್ಟು ಒಂದೊಂದು ತೊಟ್ಟು ಬಣ್ಣವನ್ನು ಹಾಕಿರಿ
- ಈಗ ಹತ್ತಿಯುಂಡೆಯಿಂದ ನಿಧಾನಕ್ಕೆ ಜಾಗರೂಕರಾಗಿ ಮುಟ್ಟಲೋ ಬೇಡವೆನ್ನುವಂತೆ ಬಣ್ಣಗಳನ್ನು ಮುಟ್ಟಿ. ಏನಾಗುತ್ತಿದೆ?
- ಈಗ ಇನ್ನೊಂದು ಹತ್ತಿಯುಂಡೆಗೆ ಒಂದೆರಡು ಹನಿ, ಪಾತ್ರೆ ತೊಳೆಯುವ ದ್ರಾವಣವನ್ನು (ಸೋಪ್) ಹಾಕಿ ಮುಂಚೆ ಮಾಡಿದಂತೆ ಮುಟ್ಟಲೋ ಬೇಡವೆನ್ನುವಂತೆ ನಿಧಾನಕ್ಕೆ ಬಣ್ಣಗಳನ್ನು ಮುಟ್ಟಿ. ಹತ್ತು ಸೆಕೆಂಡ್ ಗಳ ತನಕ ಹಿಡಿದಿಟ್ಟುಕೊಳ್ಳಬೇಕಾಗಬಹುದು. ಈಗೇನಾಗುತ್ತಿದೆ? ಪಾತ್ರೆ ತೊಳೆಯುವ ದ್ರಾವಣ ಹಾಕದೆ ಮುಟ್ಟಿದಾಗ ಅಂತಹ ಬದಲಾವಣೆಯನ್ನು ನೀವು ಗಮನಿಸುವುದಿಲ್ಲ. ಆದರೆ ದ್ರಾವಣ ಹಾಕಿ ಮುಟ್ಟಿದಾಗ, ಬಣ್ಣಗಳು ಒಳ್ಳೆ ಪಟಾಕಿ ಸಿಡಿದಂತೆ ಚದುರಿ ಹೋಗುವುದನ್ನು ಕಾಣುತ್ತೇವೆ.

ಏನಾಗುತ್ತಿದೆ:

ಹಾಲಲ್ಲಿ ಹೆಚ್ಚಾಗಿ ನೀರಿನ ಅಂಶವಿರುತ್ತದೆ. ಅದರ ಜೊತೆಗೆ ಜೀವಸತ್ವಗಳು, ಖನಿಜಗಳು, ಪ್ರೋಟೀನ್ ಮತ್ತು ಕೊಬ್ಬಿನ ಅಂಶವೂ ಇರುತ್ತದೆ. ಈ ಕೊಬ್ಬಿನ ಅಂಶಗಳು ರಾಸಾಯನಿಕ ಬಂಧಗಳ ಮೂಲಕ ಒಂದಾಗಿದ್ದು ನೀರಿನಲ್ಲಿ ಇರುತ್ತವೆ. ಯಾವಾಗ ಸೋಪ್ ಸೋಕುತ್ತದೆಯೋ, ಸೋಪಿನ ಬೈ ಪೋಲಾರ್ (ಎರಡು ಧ್ರುವಗಳು) ಗುಣದಿಂದ ಈ ಬಂಧವು ದುರ್ಬಲಗೊಳ್ಳುತ್ತದೆ. ಸೋಪಿನ ಒಂದು ಧ್ರುವವು ನೀರನ್ನು ಆಕರ್ಷಿಸುತ್ತದೆ. ಮತ್ತೊಂದು ದೂರ ತಳ್ಳುತ್ತದೆ. ಹೀಗಾದಾಗ ಈ ವೈಪರೀತ್ಯದಿಂದ ಕೊಬ್ಬಿನ ಕಣಗಳನ್ನು ಸೇರಲು ಸೋಪಿನ ಕಣಗಳು ಎಲ್ಲಾ ದಿಕ್ಕುಗಳಲ್ಲೂ ಚಲಿಸಿತ್ತವೆ. ಇದರಿಂದ ಪಟಾಕಿ ಸಿಡಿದಂತೆ ಬಣ್ಣದ ಸಿಡಿಯುವಿಕೆಯು ಕಾಣಬರುತ್ತದೆ.

ಜಾಣ ಕರ್ನಾಟಕ – ಉತ್ತರ

೧. ಮನೋಹರ ಗ್ರಂಥಮಾಲೆ.

೨. ಜಿ. ಬಿ. ಜೋಷಿ. (ಗೋವಿಂದಾಚಾರ್ಯ ಭೀಮಾಚಾರ್ಯ ಜೋಷಿ)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪಾನಿಪುರಿ ಮೇಳ

ಡಿಸೆಂಬರ್ 19-20, 2015 – 11 AM-8:30 PM

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

Annapurna, Shop No 9 & 10/1-4 Portico Parade, Toongabbie NSW 2146

(02) 88779496, 0426 768 260, **www.annapurnahouse.com.au**

ಗಾಳಿಪಟ ಮೇಳ

ಜನವರಿ 16, 2016 ಬೆಳಿಗ್ಗೆ 10:00 ಕ್ಕೆ

Rosehill Gardens James Ruse Drive, Rosehill, New South Wales, Australia

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

info@sydneykitefestival.com.au, www.sydneykitefestival.com.au

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.